ಎಮ್.ವಿ.ಸಿ.ನಂ.833/2023
ಪಿಡಬ್ಲೂ 1

**(ಇಂದು ದಿಃ 17.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಪಾಟೀ ಸವಾಲು ಃ- ಶ್ರೀ ಜಿ ಎ ಡಿ ವಕೀಲರಿಂದ ಎದುರುದಾರರ ಪರ ಃ-

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮೃತ ಸುರೇಖಾ ನನ್ನ ಹೆಂಡತಿಯಾಗಬೇಕು. ಮೃತಳು ನನ್ನ ಹೆಂಡತಿ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ಅಪಘಾತದ ದಿನಾಂಕ ನನಗೆ ಗೊತ್ತಿಲ್ಲ. ಆದರೆ 5 ವರ್ಷದ ಹಿಂದೆ ಆಗಿರಬಹುದು. ಪ್ರಸ್ತುತ ಅಪಘಾತವು ಲೋಣಿ ಕಾರಬೋಳ್ ಹಳ್ಳಿಯಲ್ಲಿ ಆಗಿರುತ್ತದೆ. ಅಪಘಾತದ ಪಡಿಸಿದ ವಾಹನದ ನಂಬರ್ ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ತಿಳಿಸಲು ನಾನು ವೆಂಕಟ್ ಮೂಳೆರವರೊಂದಿಗೆ ಪೋಲಿಸ್ ಠಾಣೆಗೆ ಹೋಗಿದ್ದೇನು. ಅಪಘಾತದ ನಂತರ ಮೃತಳಿಗೆ ದಾಖಲಿಸಿದ ಆಸ್ಪತ್ರೆಯ ಹೆಸರು ನನಗೆ ಗೊತ್ತಿಲ್ಲ. ಮೃತಳು ಪ್ರತಿನಿತ್ಯ ರೂ.1,000/- ಆದಾಯ ಹೊಂದಿದ್ದಳು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಮೃತಳ ವಯಸ್ಸನ್ನು ತೋರಿಸಲು ನಾನು ದಾಖಲೆಯನ್ನು ಹಾಜರು ಪಡಿಸಿಲ್ಲ. ಮೃತಳ ಕೂಲಿ ಕೆಲಸ ಮಾಡುತ್ತಿದ್ದಳು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಅಪಘಾತವು ಮೃತಳ ತಪ್ಪಿನಿಂದ ಆಗಿದೆ ಎಂದರೆ ಸರಿ. ಸಾಕ್ಷಿಯು ನನಗೆ ನ್ಯಾಯಾಲಯಕ್ಕೆ ಬರುವುದು ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ. 2ನೇ ಅರ್ಜಿದಾರ ನನ್ನ ಮಗ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ನನ್ನ ಮಗ ಅಪ್ರಾಪ್ತ ವಯಸ್ಕನಾಗಿದ್ದಾನೆ. ನನ್ನ ಹೆಂಡತಿ ಮಾಸಿಕವಾಗಿ ರೂ.30,000/- ಆದಾಯ ಹೊಂದಿದ್ದಳು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನ ಹೆಂಡತಿಯ ಚಿಕಿತ್ಸೆ ರೂ.20,000/- ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯು ಅಪಘಾತದಲ್ಲಿ ಗಾಯಗೊಂಡು ಮೃತ ಪಟ್ಟಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಆಳಂದ